**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ07.03.2026**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಪಿ ವಕೀಲರಿಂದ**

ನಮ್ಮ ತೋಟಕ್ಕೆ ಈಗ ಆನೆಗಳ ಉಪಟಳ ಈಗ ಕಡಿಮೆಯಾಗಿದೆ ಎಂದರೆ ಸರಿ. 2018-19 ರಲ್ಲಿ ಆನೆಗಳು ನಮ್ಮ ತೋಟಕ್ಕೆ ಮತ್ತು ವಾದಿಯರ ತೋಟಕ್ಕೆ ಬರುತ್ತಿದ್ದವು ಎಂದರೆ ಸರಿ. ನಿ ಡಿ 3 ರ ವರದಿಯಲ್ಲಿನ ವೆಂಕಟೇಶ್ ಎಂ ಕೆ ಎಂದರೆ ಈ ದಾವೆಯ ವಾದಿ ಅಲ್ಲ ಎಂದರೆ ಸರಿಯಲ್ಲ. ನಿ ಡಿ 3 ರಲ್ಲಿ ಪೊಲೀಸರ ಸಮಕ್ಷಮ ಸರ್ವೆ ಮಾಡಲಾಗಿದೆ ಎಂದು ತಿಳಿಸಿದ್ದು ಯಾವ ಪೊಲೀಸರು ಎಂದು ತಿಳಿಸಿದಿಲ್ಲ. ಪೊಲೀಸರಿಗೆ ನಾನು ನೋಟೀಸ್ ಕಳುಹಿಸಿರುವುದಿಲ್ಲ. ನ್ಯಾಯಾಲಯದ ಸರ್ವೆಯಾದ 2 ವರ್ಷದ ನಂತರ ನಾನು ನಿ ಡಿ 3 ಸರ್ವೆಯನ್ನು ಮಾಡಿಸಿ ಹಾಜರುಪಡಿಸಿರುತ್ತೇನೆಂದರೆ ಸರಿ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಿ ಡಿ 3 ವರದಿಯಲ್ಲಿ ವೆಂಕಟೇಶ್ ರವರು ಸಹಿ ಮಾಡಲು ನಿರಾಕರಿಸಿರುತ್ತಾರೆಂಬುದನ್ನು ಮಧ್ಯದಲ್ಲಿ ಸೇರಿಸಿ ತಿದ್ದುಪಡಿ ಮಾಡಿರುತ್ತಾರೆಂದರೆ ಸಾಕ್ಷಿ ವರದಿಯನ್ನು ಬರೆದ ನಂತರ ವಾದಿ ಸಹಿ ಮಾಡದ ಕಾರಣ ಅದನ್ನು ಮಧ್ಯದಲ್ಲಿ ಬರೆದಿರುತ್ತಾರೆಂದು ನುಡಿಯುತ್ತಾರೆ.

ನ್ಯಾಯಾಲಯದ ನಿಯೋಗಿ ಇಬ್ಬರು ಪಕ್ಷಗಾರರಿಗೆ ನೋಟೀಸ್ ನೀಡಿ ಸರ್ವೆ ಕಾರ್ಯ ಮಾಡಿರುತ್ತಾರೆಂದರೆ ಸರಿ. ಸರ್ವೆ ದಿನದಂದು ದಿನಾಂಕ 21.10.2020 ರಲ್ಲಿ ಸ್ಥಳದಲ್ಲಿ ನಾನು ಸಹ ಹಾಜರಿದ್ದು ಸಹಿ ಮಾಡಿರುತ್ತೇನೆಂದರೆ ಸರಿ. ನ್ಯಾಯಾಲಯದ ನಿಯೋಗಿಯವರು ಸ ನಂ 3/2 ಮತ್ತು 1/5 ರ ಪ್ರತ್ಯೇಕ ನಕಾಶೆ ನೀಡಿರುತ್ತಾರೆಂದರೆ ಸರಿ. ಸದರಿ ನಕಾಶೆಯಲ್ಲಿ ಒತ್ತುವರಿಯಾಗಿಲ್ಲ ಎಂದು ತೋರಿಸಿರುತ್ತಾರೆಂದರೆ ಸಾಕ್ಷಿ ನ್ಯಾಯಾಲಯದ ನಿಯೋಗಿಯವರು ಒತ್ತುವರಿ ಬಗ್ಗೆ ನಮೂದು ಮಾಡಲು ಅವಕಾಶ ಇರುವುದಿಲ್ಲ ಎಂದು ತಿಳಿಸುತ್ತಾರೆ. ಯಾವುದೇ ಒತ್ತುವರಿ ಇಲ್ಲದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಡಿ 3 ನ್ನು ಈ ಪ್ರಕರಣಕ್ಕಾಗಿ ಸೃಷ್ಠಿ ಮಾಡಿರುತ್ತೇವೆಂದರೆ ಸರಿಯಲ್ಲ. ವಾದಿ ನಮ್ಮ ಜಾಗದಲ್ಲಿ ಯಾವುದೇ ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ದಾಖಲಾತಿಗಳನ್ನು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯ ವಿರುದ್ಧ ವಿನಕಾರಣ ಸುಳ್ಳು ಪೊಲೀಸ ಪ್ರಕರಣ ದಾಖಲಿಸಿ ತೊಂದರೆ ನೀಡುತ್ತಿದ್ದೇನೆಂದರೆ ಸರಿಯಲ್ಲ. ದಾವ ಆಸ್ತಿಯ ದಾಖಲೆಗಳು ನನ್ನ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗನ ಹೆಸರಿಗೆ ಮಾಡಿರುತ್ತೇನೆ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**ಸಹಿ/-**

ಸಿ/ಸಿ **1ನೇ ಹೆಚ್ಚುವರಿ ಸಿವಿಲ್**

**ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**